ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ.,
ನ್ಯಾಯಾಲಯ, ಚಿಕ್ಕಮಗಳೂರು.

<u>ಸಿ.ಸಿ.713/2024</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಇರ್ಫಾನ್ | ಪಿ.ಡಬ್ಲ್ಯೂ.2 |
| ತಂದೆಯ ಹೆಸರು | : | ಅನಿಸ್ ಅಹಮ್ಮದ್ | ಸಿ.ಡಬ್ಲ್ಯೂ.2 |
| ವಯಸ್ಸು | : | 33 ವರ್ಷ | |
| ವೃತ್ತಿ | : | ಚಾಲಕ | |
| ವಾಸ | : | ಸಂತೆ ಮಾರ್ಕೇಟ್, ಚಿಕ್ಕಮಗಳೂರು | |

<u>ದಿನಾಂಕಃ 21-04-2026 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಮಾನ್ಯ ಎಪಿಪಿ ರವರಿಂದಃ-</u>

ಆರೋಪಿಯ ಪರಿಚಯವಿಲ್ಲ. ಚಾಸಾ-3 ರವರ ಪರಿಚಯವಿದೆ. ನೋಟೀಸ್ ಅನ್ನು ಹಾಗೂ ಮಹಜರ್ ಅನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-1 ಮತ್ತು 2 ಎಂದು ಗುರುತಿಸಲಾಗಿದ್ದು ನನ್ನ ಸಹಿ ನಿಪಿ-1(ಬಿ) ಹಾಗೂ ನಿಪಿ-2(ಬಿ) ಇರುತ್ತದೆ. ಸದರಿ ಸಹಿಯನ್ನು ನಾನು ಶಂಕರಪುರದಲ್ಲಿ ರಾತ್ರಿಃ12.00 ಗಂಟೆಗೆ ಹಾಕಿರುತ್ತೇನೆ. ಶಂಕರಪುರದ ಒಂದು ಮಟನ್ ಅಂಗಡಿಯಲ್ಲಿ ಸದರಿ ಸಹಿಯನ್ನು ಹಾಕಿರುತ್ತೇನೆ. ಸದರಿ ಸಹಿಯನ್ನು ಮಹಜರ್ ಗೆ ಹಾಕುವಂತೆ ಪೊಲೀಸರು ಹೇಳಿದ್ದು ನಾನು ಸಹಿಯನ್ನು ಹಾಕಿರುತ್ತೇನೆ. ಆಗ ಸಮಯ ರಾತ್ರಿಃ12.00 ರಿಂದ 12.30 ಗಂಟೆ ಆಗಿತ್ತು. ಆ ಸಮಯದಲ್ಲಿ ನನ್ನ ಜೊತೆ ಬೇರೆ ಯಾರೂ ಇರಲಿಲ್ಲ. ಸದರಿ ಮಹಜರ್ ಗೆ

ನಾನು ಮತ್ತು ಚಾಸಾ-3 ರವರು ಸಹಿಯನ್ನು ಹಾಕಿರುತ್ತೇವೆ. ನನ್ನ ಸಮಕ್ಷಮ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿರುವುದಿಲ್ಲ.

(ಈ ಹಂತದಲ್ಲಿ ಎಪಿಪಿರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ-

ದಿಃ13.02.2024 ರಂದು ಮಧ್ಯರಾತ್ರಿಃ12.30 ರಿಂದ 01.30 ರವರಗೆ ಘಟನಾ ಸ್ಥಳದಲ್ಲಿ ಪೊಲೀಸರು ನಿಪಿ-2 ರಂತೆ ಮಹಜರ್ ತಯಾರಿಸಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಈಗ ನನಗೆ ತೋರಿಸುತ್ತಿರುವ ಫೋಟೋಗಳನ್ನು ತೆಗೆಯಲಾಗಿರುತ್ತದೆ ಎಂದರೆ ಸರಿ. ಸದರಿ ಫೋಟೋಗಳನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿರುತ್ತದೆ. ಆ ಸಮಯದಲ್ಲಿ 175 ಕೆ.ಜಿ ದನದ ಮಾಂಸ, 2 ದೊಡ್ಡ ಕತ್ತಿ, ಒಂದು ಚಾಕು, ಒಂದು ಹರ, 2 ಕಬ್ಬಿಣದ ಹುಕ್ಕುಗಳು, ಒಂದು ಡಿಜಿಟಲ್ ತೂಕದ ಯಂತ್ರ, ಒಂದು ಪ್ಲಾಸ್ಟೀಕ್ ಟಬ್ ಅನ್ನು ಹಾಗೂ ಒಂದು ಕಬ್ಬಿಣದ ರಾಡ್, ಒಂದು ಫ್ರಿಡ್ಜ್ ಅನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಎಲ್ಲಾ ವಸ್ತುಗಳನ್ನು ನನ್ನ ಸಮಕ್ಷಮ ಅಮಾನತ್ತುಪಡಿಸಿಕೊಂಡಿದ್ದರೂ ಕೂಡಾ ನಾನು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-

ನಾನು ಘಟನಾ ಸ್ಥಳದಲ್ಲಿ ಯಾವುದೇ ಸಹಿಯನ್ನು ಹಾಕಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್‌ಆರ್ಃ